## ಇಲ್ಲಿಯವರೆಗೆ



ರುದ್ರನಾಗ ಮನೆಗೆ ಬಂದಾಗ ಮನೆಯಲ್ಲಿ ಖುಷಿಯ ವಾತಾವರಣವಿರುತ್ತದೆ. ಕಾರಣ ಕೇಳಿದಾಗ ತಂಗಿ ಅರುಂಧತಿಯಿಂದ ಪತ್ರ ಬಂದಿದ್ದು, ಆಕೆ ತುಂಬು ಗರ್ಭಿಣಿ. ಚೊಚ್ಚಲ ಹೆರಿಗೆ ತವರು ಮನೆಯಲ್ಲೇ ಆಗಬೇಕಿದೆ. ಹೀಗಾಗಿ ಅಣ್ಣನ ಮನೆಗೆ ಬರುವುದಾಗಿ ತಿಳಿಸಲಾಗಿತ್ತು.

ಇತ್ತ ಸ್ಮಶಾನದ ನಡುಗಡ್ಡೆಯಲ್ಲಿ ಮಕ್ಕಳನ್ನು ಕಳೆದುಕೊಂಡ ರಾಮಯ್ಯ ಅಳುತ್ತಾ ಕುಳಿತಿರುವಾಗ ಸಾಹುಕಾರ ರಾಜಾರಾಯರು ಅಲ್ಲಿಗೆ ಬರುತ್ತಾರೆ. ರಾಮಯ್ಯ ಮಕ್ಕಳಿಗೆ ಸಾವಿನ ಶಿಕ್ಷೆಯನ್ನು ನೀಡಿದ್ದು ತಾವೇ ಎಂದೂ ಗರ್ವದಿಂದ ಹೇಳುತ್ತಾರೆ. ರಾಮಯ್ಯ ಏನೂ ಮಾತನಾಡುವುದಿಲ್ಲ. ಆದರೆ ಸೇಡು ಹಾವಿನಂತೆ ಭುಸುಗುಡುತ್ತಿರುತ್ತದೆ ರಾಮಯ್ಯನ ಮುಖದ ಮೇಲೆ. ಮತ್ತೊಂದು ದಿನ ರಾತ್ರಿ ಒಂಬತ್ತು ಗಂಟೆಗೆ ರಾಜಾರಾಯರು ಕಾರು ಓಡಿಸಿಕೊಂಡು ಹೋಗುವಾಗ ಕಾಡಿನ ದಾರಿಯಲ್ಲಿ ಯಾರೋ ಕಂಬಳಿ ಹೊದ್ದು ಅಡ್ಡಮಲಗಿದ್ದರು. ಕಾರು ಇಳಿದು ರಾಜಾರಾಯರು ಬರುತ್ತಿದ್ದಂತೆ ರಾಮಯ್ಯ ಭಯಂಕರ ವಿಷ ಹಾಗೂ ಮುಳ್ಳುಗಳಿರುವ ಜಾಬಲಿ ಗಿಡದಿಂದ ರಾಜಾರಾಯರ ಮುಖದ ಮೇಲೆ ಜೋರಾಗಿ ಉಜ್ಜುತ್ತಾನೆ. ರಾಜಾರಾಯರ ಮುಖದ ಮೇಲೆ ಗುಳ್ಳೆಗಳು ಬಂದು ರಕ್ತಸೋರಿ ಒದ್ದಾಡುತ್ತಾರೆ. ಯಾರೊಬ್ಬರೂ ಸಹಾಯಕ್ಕೆ ಬರದೆ ಕೆಳಗೆ ಬಿದ್ದ ಅವರ ಮುಖ ಅಡ್ಡವಾಗುತ್ತದೆ. ಬಾಯಿಂದ ನೊರೆ ಒಸರುತ್ತದೆ. ರಾಜಾರಾಯರ ಅಂತ್ಯವಾಗುತ್ತದೆ. ವಿಷಜಂತು ಕಡಿದು ರಾಜಾರಾಯರು ಸಾವನ್ನಪ್ಪಿದ್ದಾರೆ ಎಂಬ ಸುದ್ದಿ ಹರಡುತ್ತದೆ.

ಇತ್ತ ಕಡೆ ರುದ್ರನಾಗನ ತಂಗಿ ಅರುಂಧತಿಯನ್ನು ಆಕೆಯ ಗಂಡ, ಉದ್ಯಮಿ ಮನೋಹರ ಕಾರಿನಲ್ಲಿ ಕರೆದುಕೊಂಡು ಸೋಲಿಗಪುರದತ್ತ ಬರುತ್ತಾನೆ. ಆತನಿಗೆ ಮಾಟ, ಮಂತ್ರಗಳಲ್ಲಿ ನಂಬಿಕೆ ಇರುವುದಿಲ್ಲ. ಪತ್ನಿಯ ಹೆರಿಗೆ ನರ್ಸಿಂಗ್‌ಹೋಂನಲ್ಲಾಗಲಿ ಎಂಬ ಬಯಕೆ ಆತನದ್ದಾದರೆ, ತವರು ಮನೆಯಲ್ಲೇ ಆಗಲಿ ಎಂಬುದು ಅರುಂಧತಿ ಇಚ್ಛೆ. ಹೀಗಾಗಿ ತವರುಮನೆಗೇ ಕರೆದುಕೊಂಡು ಬರುತ್ತಾನೆ. ಅಣ್ಣನ ಮನೆಗೆ ಬಂದಾಗ ರುದ್ರನಾಗನ ಹೆಂಡತಿ ತುಂಗವ್ವ ಆದರದಿಂದ ಸ್ವಾಗತಿಸುತ್ತಾಳೆ. ರುದ್ರನಾಗನೂ ಚೆನ್ನಾಗಿ ಮಾತನಾಡುತ್ತಾನೆ. ಸ್ವಲ್ಪ ಹೊತ್ತಿನ ಬಳಿಕ ಮನೋಹರ ಸಪ್ಪಗಿರುವಂತೆ ನಾಟಕ ಮಾಡುತ್ತಾನೆ. ಏನೆಂದು ವಿಚಾರಿಸಿದಾಗ ವೃತ್ತಿ ಶತ್ರುಗಳ ತೊಂದರೆ. ಈ ದ್ವೇಷ ಮಾಡುವ ಮೂವರಿಂದ ತೊಂದರೆಯಾಗುತ್ತಿದೆ. ಅವರ ಅಂತ್ಯವಾಗಬೇಕು ಎಂದು ರುದ್ರನಾಗನಲ್ಲಿ ಹೇಳುತ್ತಾನೆ. 'ಅಂಥವರನ್ನು ಬಿಡೋದಿಲ್ಲ. ಅವರ ಮೇಲೆ ಕ್ಷುದ್ರಶಕ್ತಿ ಪ್ರಯೋಗಿಸುತ್ತೇನೆ. ಅಂತಹವರ ಉಗುರು, ತಲೆಯ ಕೂದಲು ಮತ್ತು ಹೆಜ್ಜೆ ಮಣ್ಣು ಬೇಕು. ಅದಿಲ್ಲದೆ ಪ್ರಯೋಗ ಅಸಾಧ್ಯ.'ಎಂದಾಗ ಅವೆಲ್ಲವನ್ನೂ ತಂದಿರುವುದಾಗಿ ಹೇಳುತ್ತಾನೆ. ಇದರಿಂದ ರುದ್ರನಾಗನಿಗೆ ಬಹಳ ಅಚ್ಚರಿಯಾಗುತ್ತದೆ. ಈಗ ಮದಂತನ ಸಹಾಯದಿಂದ ಆ ಮೂವರಿಗೆ ಕ್ಷುದ್ರಶಕ್ತಿ ಪ್ರಯೋಗ ಆರಂಭವಾಗುತ್ತದೆ. ಈ ವಿದ್ಯೆಯಲ್ಲಿ ನಂಬಿಕೆ ಇರದ ಮನೋಹರ ರುದ್ರನಾಗನ ಹೆಂಡತಿ ಮಕ್ಕಳ ಮೇಲೆ ಪ್ರಯೋಗಿಸುವಂತೆ ಹೇಳಿರುವುದು ಯಾರಿಗೂ ಗೊತ್ತೇ ಆಗುವುದಿಲ್ಲ.

ತಾನೇ ಉಗುರು, ತಲೆಯ ಕೂದಲು ಮತ್ತು ಹೆಜ್ಜೆ ಮಣ್ಣನ್ನು ಸಂಗ್ರಹಿಸಿ ಈ ಮಾಂತ್ರಿಕನಿಗೆ ನೀಡಿದ್ದ. ಈಗ ಅದನ್ನು ಉಪಯೋಗಿಸಿ ಮೂರು ಗೊಂಬೆಗಳನ್ನು ಮಾಡಲಾಗಿದೆ. ಅದರ ಮೇಲೆ ಭಯಂಕರ ಕ್ಷುದ್ರಶಕ್ತಿಗಳನ್ನು ಆಹ್ವಾನಿಸಿ ಸೇರಿರುವ ಪ್ರಯತ್ನಮಾಡಲಾಗುತ್ತಿದೆ.

ಆವಾಹನೆಯ ಮಂತ್ರ.

ಕೊನೆಯ ಚರಣದ ಮಂತ್ರ.

ಭೂಮಿ ಕಂಪಿಸಿದಂತಾಯಿತು.

ಇಡೀ ಸ್ಮಶಾನ ತಿರುಗುತ್ತಿದೆಯೇನೋ ಎಂಬ ಭ್ರಮೆ ಉಂಟಾಗುತ್ತದೆ.

ಪ್ರೇತಗಳ ಹಾಹಾಕಾರ.

ಪಿಶಾಚಿಗಳ ಕಲರವ.

ನಗು... ಕೇಕೆ... ಅಬ್ಬರ.

ಜೋಡಿ ಸಮಾಧಿಗಳು ಬಡಾಲ್ ಎಂಬ ಶಬ್ದದೊಂದಿಗೆ ಬಾಯಿ ತೆರೆಯಿತು.

ಹೊಗೆ ಬರಲಾರಂಭಿಸಿತು.

ಗುರು ಮಾಂತ್ರಿಕ ರುದ್ರನಾಗನಿಗೆ ಮಾಂತ್ರಿಕ ವಿದ್ಯೆಯನ್ನು ಕಲಿಸಿರುವ ಗುರು ಬಾಬಾನಂದನ ಪ್ರೇತರೂಪ.

ಹೊಗೆಯ ರೂಪದಲ್ಲಿ ಹೊರಬಂದಿದೆ.

ಗಿರಗಿರನೆ ತಿರುಗುತ್ತಿದೆ.

ರುದ್ರನಾಗ ನಮಸ್ಕರಿಸಿದ.

ಇಡೀ ನಭೋ ಮಂಡಲವನ್ನು ಕಣ್ಣು ಕೋರೈಸುವ ರೀತಿಯಲ್ಲಿ ಬೆಳಗಿತು ಮಿಂಚು.

ಬರಸಿಡಿಲ ಬಡಿತದ ಶಬ್ದ ಮಾಂತ್ರಿಕರುಗಳಿಗೆ ಕಂಡಿತು. ಅನತಿ ದೂರದಿಂದ ಇತ್ತ ಕಡೆ ನುಗ್ಗಿ ಬರುತ್ತಿದೆ ಕೆಂಪು ಜ್ವಾಲೆ. ಪೊರಕೆಯಾಕಾರದಲ್ಲಿ ಎರಡು ಕ್ಷುದ್ರಶಕ್ತಿಗಳು ಈಗ ಈ ಜ್ವಾಲೆಯಲ್ಲಿ ಸಂಗಮಗೊಂಡು ಪ್ರಚಂಡ ವೇಗದಲ್ಲಿ ನುಗ್ಗುತ್ತಿವೆ. ಇಬ್ಬರು ಮಾಂತ್ರಿಕರು ಕೋಳಿ, ಕುರಿಗಳನ್ನು ಕತ್ತರಿಸಿ ರಕ್ತತರ್ಪಣ ನೀಡುತ್ತಿದ್ದಾರೆ.

ಈ ಹಂತ ಮುಗಿಯಿತು.

ಪೊರಕೆಯಾಕಾರದ ಕೆಂಪು ಜ್ವಾಲೆ ಗಿರಗಿರನೆ ತಿರುಗುತ್ತಾ ಗೊಂಬೆಗಳನ್ನು ಸೇರಿಕೊಂಡವು. ಗೊಂಬೆಗಳು ಅದುರುತ್ತಿವೆ. ಮಾಂತ್ರಿಕರು ಉಪಸಂಹಾರದ ಕ್ರಿಯೆಗೆ ಅರ್ಧ ಗಂಟೆ ಕಾಯಬೇಕು. ರುದ್ರನಾಗ ಶಿಷ್ಯನ ಕಡೆ ಹೆಮ್ಮೆಯಿಂದ ನೋಡುತ್ತಾ 'ಮದಂತ ನನಗೆ ನಿನ್ನ ಬಗ್ಗೆ ತುಂಬಾ ಅಭಿಮಾನ ಉಂಟಾಗುತ್ತಿದೆ. ನಾನು ಕಲಿಸಿದ್ದು ಸಾರ್ಥಕ ಆಗಿದೆ ಅಂತ ನನಗೆ ಅನಿಸುತ್ತಿದೆ.'

ಮದಂತ ನಿರ್ಲಿಪ್ತನಾಗಿದ್ದ. ಅವನಿಗೆ ಬೇಸರವಾಗುತ್ತಿದೆ. ಕರುಳು ಹಿಂಡಿದಂತೆ ಆಗುತ್ತಿದೆ. ಇವತ್ತು ರಾತ್ರಿ ಮೂರು ಮಂದಿ ಯಮಯಾತನೆಯನ್ನು ಅನುಭವಿಸುತ್ತಾ ಸಾಯುತ್ತಾರೆ. ಈ ಸಾವನ್ನು ತಪ್ಪಿಸಲು ಪ್ರಪಂಚದ ಯಾವ ಮಹಾನುಶಕ್ತಿಯಿಂದಲೂ ಸಾಧ್ಯವಿಲ್ಲ. ಆ ನತದೃಷ್ಟರು ಯಾರು?

* * *

ತುಂಗಮ್ಮ ಮತ್ತು ಅವಳ ಇಬ್ಬರು ಮಕ್ಕಳು ಮೂಲೆಯಲ್ಲಿದ್ದಾರೆ.

ಕತ್ತಲು... ಕತ್ತಲು... ಕವಿದಿದೆ.

'ಅಮ್ಮ...' ಎಂದು ತುಂಗಮ್ಮನ ಹಿರಿಯ ಮಗ ಮೆಲ್ಲಗೆ ಕೂಗಿದ.

'ಏನಪ್ಪಾ ಆನಂದ...'

'ನನಗೆ ತುಂಬಾ ಭಯವಾಗುತ್ತಿದೆ'

'ದೇವರ ಸ್ಮರಣೆ ಮಾಡು ಕಂದ' ಎಂದು ಎಲ್ಲಾ ತಾಯಂದಿರಂತೆ ಹೇಳಿದಳು. ಸಹಜ ಇದು ಸಹಜ ಬಿಡಿ.

ತುಂಗಮ್ಮನ ಮಗ 'ಅಮ್ಮ... ಈ ಮನೆಯಲ್ಲಿ ದೇವರ ಸ್ಮರಣೆ ಮಾಡಕೂಡದಂತೆ'

ಬೆಚ್ಚಿಬಿದ್ದಳು ತುಂಗಮ್ಮ.

ಅದು ಮಾಂತ್ರಿಕನ ಮನೆ.

ಅವಳ ಗಂಡ ಮಾಂತ್ರಿಕ.

ದೇವರ ವಿಗ್ರಹವಾಗಲಿ, ಫೋಟೊಗಳಾಗಲಿ ಇರಲಿಲ್ಲ. ಮನೆಯ ಮುಂದೆ ತುಳಸಿ ಗಿಡವನ್ನು ಸಹ ಬೆಳೆಸಲು ರುದ್ರನಾಗ ಅನುಮತಿ ನೀಡಿರಲಿಲ್ಲ. ದೆವ್ವಗಳ ಆರಾಧಕನ ಹೆಂಡತಿ ಮತ್ತು ಮಕ್ಕಳಿಗೆ ಈಗ ದೇವರು ನೆನಪಾಗುತ್ತಿದ್ದಾರೆ. ಎಂತಹ ವಿಪರ್ಯಾಸ?

ವಿಪರೀತ ಸೆಕೆ ಆಗುತ್ತಿದೆ. ಏನೋ ಉರಿ... ಸಂಕಟ. ತುಂಗಮ್ಮ ಬೆಂಕಿಪೊಟ್ಟಣವನ್ನು ಎತ್ತಿಕೊಂಡು ಕಡ್ಡಿಯನ್ನು ಗೀರಿದಳು. ಪರ್ರ್ ಎಂಬ ಶಬ್ದ. ಉರಿಯುತ್ತಿರುವ ಬೆಂಕಿಕಡ್ಡಿಯ ಬೆಳಕಲ್ಲಿ ಅವಳಿಗೆ ಭಯಗೊಂಡಿರುವ ಮಕ್ಕಳ ಮುಖ ಕಂಡುಬಂದಿತು. ನಂತರ ಹೊಗೆ ದಟ್ಟವಾದ ಹೊಗೆ ಎಲ್ಲಾ ಕಡೆಯಿಂದಲೂ ಬರುತ್ತಿದೆ. ಎಲ್ಲರೂ ಕೆಮ್ಮಲಾರಂಭಿಸಿದರು. ದಡಬಡ ಶಬ್ದವಾಗುತ್ತಿದೆ. ಪಾತ್ರೆಗಳು ಬೀಳುತ್ತಿವೆ. ಮಕ್ಕಳು ತಾಯಿಯನ್ನು ಬಿಗಿಯಾಗಿ ತಬ್ಬಿಕೊಂಡರು, ಭಯದಿಂದ ನಡುಗುತ್ತಿದ್ದಾರೆ. ಮೈಯೆಲ್ಲಾ ಉರಿಯುತ್ತಿದೆ. ಹತ್ತು ನಿಮಿಷಗಳ ಅವಧಿಯಲ್ಲಿ ಈ ಮೂವರು ಎರಡು ಸಲ ರಕ್ತವಾಂತಿ ಮಾಡಿಕೊಂಡಿದ್ದರು. ಮಾಂತ್ರಿಕನ ಹೆಂಡತಿಯಾದ ತುಂಗಮ್ಮನಿಗೆ ಸತ್ವದ